# ಕಿಲುಬು

■ ವಸುಮತಿ ಉಡುಪ

## ನಾಗಶ್ರೀ ತವರು ಮನೆಯತ್ತ ರಾಮಚಂದ್ರ

ಅಣ್ಣ ಸಾಯುತ್ತಿದ್ದಂತೆ ಮುಂದೇನು ಎನ್ನುವ ಕುರಿತು ಈ ಮನೆಯಲ್ಲಿ ದೊಡ್ಡ ಚರ್ಚೆ ನಡೆದಿದೆ. ಏನೇನು ಪಾಯಿಂಟು ಹಾಕಿ ಅಳಿಯನನ್ನು ಬಗ್ಗಿಸಬೇಕು ಎಂದು ಇವರು ತೀರ್ಮಾನ ಮಾಡಿಕೊಂಡು ಬಿಟ್ಟಿದ್ದಾರೆ ಎನ್ನುವುದು ಅಂಗೈ ನೆಲ್ಲಿಯಂತೆ ಖಾತ್ರಿಯಾಗಿ ಹೋಯ್ತು ರಾಮಚಂದ್ರನಿಗೆ. ಇಷ್ಟಾದ ಮೇಲೆ ತಾನು ಯಾಕೆ ಹಿಂಜರಿಯಬೇಕು? ತನ್ನ ಮನಸ್ಸಿನಲ್ಲಿದ್ದುದನ್ನು ಹೇಳಿದ ರಾಮಚಂದ್ರ,

'ಒಂದು ಮಾತು ಹೇಳ್ತೀನಿ, ತಪ್ಪು ತಿಳ್ಕಂಬೇಡಿ.'

'ಹೇಳು, ಹೇಳು. ಎಲ್ಲಾ ಕೂತು ಮಾತಾಡಿ ಒಂದು ತೀರ್ಮಾನಕ್ಕೆ ಬರ್ಬೇಕು. ತಪ್ಪು ತಿಳಿಯೋಕೆ ಎಂತದಿದೆ?' ಉತ್ಸುಕತೆಯಿಂದ ಪ್ರತಿಕ್ರಿಯಿಸಿದರು ಶೀನಪ್ಪಯ್ಯ.

'ನಾನು ಜಮೀನು, ಮನೆ ಮಾರಿ ಹಾಕಿ ಕಣ್ಣು ಕಾಣದ ಊರಿಗೆ ಬಂದಿರೋದೂ ಒಂದೇ, ನೀವು ಬಂದಿರೋದೂ ಒಂದೇ

